ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 1544/2022

..............................................................................

CW 07
PW 03

| | | |
|---|---|---|
| ಹೆಸರು | : | ರಾಘವೇಂದ್ರಸಿಂಗ್ ಹಜೇರಿ, |
| ಗಂಡನ ಹೆಸರು | : | ರಾಜೆಸಿಂಗ್ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಕಂಡಕ್ಟರ್ ಕೆಲಸ |
| ವಾಸಸ್ಥಳ | : | ಧಾರವಾಡ. |

ದಿನಾಂಕ 10-12-2025 ರಂದು ಸಾಕ್ಷಿಗೆ ಸತ್ಯಪ್ರತಿಜ್ಞೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1 ರಿಂದ 4 ರವರು ಪರಿಚಯ ಇಲ್ಲ. ಚಾಸಾ 5 ಮತ್ತು 6 ರವರ ಪರಿಚಯ ಇದ್ದಾರೆ. ಚಾಸಾ 8 ರಿಂದ 10 ರವರು ಪರಿಚಯ ಇಲ್ಲ. ಆರೋಪಿಯ ಪರಿಚಯ ಇದೆ.

2022 ರಲ್ಲಿ ಹವಗಿ ಕಡೆಯಿಂದ ಹಳಿಯಾಳಕ್ಕೆ ಬರುವಾಗ ಜೋರಾಗಿ ಶಬ್ದ ಕೇಳಿತು. ನಾವು ಕೆಳಗೆ ಇಳಿದು ನೋಡಿದಾಗ ಒಬ್ಬ ಬೈಕ್ ಸವಾರ ರಸ್ತೆಯ ಪಕ್ಕದಲ್ಲಿ ಬಿದಿದ್ದನು. ಆತನಿಗೆ ಕೈಗೆ ಪೆಟ್ಟಾಗಿತ್ತು. ವಾಹನಕ್ಕೆ ಡ್ಯಾಮೇಜ್ ಆಗಿತ್ತು. ನಂತರ ನಾನು ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆ. ನಮ್ಮ ಬಸ್ಸ ಹಳಿಯಾಳ ಕಡೆಗೆ ನಿಧಾನವಾಗಿ ಬರುತ್ತಿತ್ತು. ಅಪಘಾತ ಹೇಗೆ ಆಯಿತು ಎನ್ನುವುದು ನನಗೆ ಗೊತ್ತಿಲ್ಲ. ಈ ವಿಚಾರವಾಗಿ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ನಾವು ಆ ದಿನ ಕರ್ತವ್ಯದಲ್ಲಿದ್ದ ಬಸ್ ನ ಸಂಖ್ಯೆ ಕೆಎ-25-ಎಫ್-2380. ಸದರಿ ವಾಹನವನ್ನು ಆರೋಪಿತನು ಚಲಾಯಿಸುತ್ತಿದ್ದನು.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 13-10-2022 ರಂದು ಪೊಲೀಸರಿಗೆ ಹೇಳಿಕೆ ನೀಡಿ ಅದರಲ್ಲಿ ಹೀಗಿರುತ್ತಾ ದಿನಾಂಕ 13-10-2022 -------------------------- ತೇರಗಾಂವ ಗ್ರಾಮ ಹಳಿಯಾಳ ತಾಲೂಕು ಎಂದು ಗೊತ್ತಾಯಿತು ಎಂದು ನುಡಿದಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲ ಗಳೆದ ಮೇರೆಗೆ ಸದರಿ ಹೇಳಿಕೆಯನ್ನು ನಿಪಿ 5 ಎಂದು, ಸಂಬಂಧಪಟ್ಟ ಭಾಗವನ್ನು ನಿಪಿ 5 ಎ ಎಂದು ಗುರುತಿಸಲಾಯಿತು. ಆರೋಪಿ ಮತ್ತು ನಾನು ಸುಮಾರು 10 ವರ್ಷಗಳಿಂದ ಒಂದೇ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತೇವೆ. ಅಪಘಾತವನ್ನು ನೀವು ಕಣ್ಣಾರೆ ನೋಡಿದ್ದರೂ, ನಿಮಗೆ ಘಟನೆಯ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿತನು ನಿಮಗೆ ಗೊತ್ತಿರುವ ವ್ಯಕ್ತಿ ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು :** ಆರೋಪಿತರ ಪರ ಶ್ರೀಮತಿ ಆರ್ ಎಮ್ ಸಿ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.